# ನವೋದಯ ಕಾಲಘಟ್ಟದ ಕವನಗಳಲ್ಲಿ ವ್ಯಕ್ತಿ ಚಿತ್ರಣಗಳು

ಎಂ. ಮಹಾದೇವಪ್ರಭು,
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,

ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.

ಕನ್ನಡ ಸಾಹಿತ್ಯವು ಪ್ರಾಚೀನವಾದುದಾಗಿದೆ. ೧೫೦೦ ವರ್ಷಗಳಿಂದ ಬೆಳೆದು ಬಂದು ಸಂಪದ್ಭರಿತವಾಗಿದೆ. ಕನ್ನಡ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಈ ಕೆಳಗಿನಂತೆ ವಿಭಾಗಿಸಬಹುದಾಗಿದೆ :

**೧.ಪ್ರಾಚೀನಕನ್ನಡ ಸಾಹಿತ್ಯ(ಹಳೆಗನ್ನಡ ಪೂರ್ವಕಾಲ-ಹಳೆಗನ್ನಡ)**

**೨.ಮಧ್ಯಕಾಲೀನ ಕನ್ನಡ ಸಾಹಿತ್ಯ(ವಚನ ಸಾಹಿತ್ಯ-ಕೀರ್ತನ ಸಾಹಿತ್ಯ ಇತ್ಯಾದಿ)**

**೩.ಆಧುನಿಕ ಕನ್ನಡ ಸಾಹಿತ್ಯ**

ಅದರಂತಯೇ ಆಧುನಿಕ ಕನ್ನಡ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಆಯಾ ಕಾಲಘಟ್ಟದ ಆಶಯಗಳಿಗೆ ಅನುಗುಣವಾಗಿ ಈ ಕೆಳಗಿನಂತೆ ವಿಭಾಗಿಸಬಹುದು :

**೧.ನವೋದಯ ಪೂರ್ವ ಸಾಹಿತ್ಯ (೧೭೫೦ ರಿಂದ-೧೯೨೦).**

**೨.ನವೋದಯ ಸಾಹಿತ್ಯ (೧೯೨೦-೧೯೪೫).**

**೩.ಪ್ರಗತಿಶೀಲ ಸಾಹಿತ್ಯ (೧೯೪೫-೧೯೫೨).**

**೪.ನವ್ಯ ಸಾಹಿತ್ಯ (೧೯೫೦-೧೯೭೫).**

**೫.ದಲಿತ-ಬಂಡಾಯ ಸಾಹಿತ್ಯ (೧೯೭೦ ರಿಂದ ಮುಂದೆ).**

ಆಧುನಿಕ ಕನ್ನಡಸಾಹಿತ್ಯದಲ್ಲಿ "ನವೋದಯ" ಸಾಹಿತ್ಯ ಅತ್ಯಂತ ವಿಶಿಷ್ಟವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದ ಆಧುನಿಕ ಕನ್ನಡಸಾಹಿತ್ಯ ಪಂಥಕ್ಕೆ ನವೋದಯ ಸಾಹಿತ್ಯ ಎಂದು ಹೆಸರನ್ನು ಕೊಟ್ಟವರು ಕುವೆಂಪು ಎಂದು ಜಿ. ಎಸ್. ಶಿವರುದ್ರಪ್ಪನವರು ಗುರುತಿಸಿದ್ದಾರೆ. ನವೋದಯ ಶಬ್ದದ ಅರ್ಥವೆ 'ಹೊಸಹುಟ್ಟು' ಎಂಬುದಾಗಿದೆ. ಈ ಹೊಸಹುಟ್ಟನ್ನು ಹಲವಾರು ಕವಿಗಳು ಗುರುತಿಸುವ ಮೂಲಕ ಉತ್ಸಾಹದಿಂದ ಸ್ವಾಗತಿಸಿರುವುದನ್ನು ಕಾಣಬಹುದಾಗಿದೆ.

ನಾಡಿನ ಪುಣ್ಯದ ಪೂರ್ವ ದಿಗಂತದಿ

**ನವ ಅರುಣೋದಯ ಹೊಮ್ಮುತ್ತಿದೆ ;**

**ಚಿರನೂತನಚೇತನುದುತ್ಸಾಹದಿ**

**ನವೀನ ಜೀವನಚಿಮ್ಮುತಿದೆ;** [1]

ನವೋದಯ ಸಾಹಿತ್ಯವನ್ನು ಹೊಸಗನ್ನಡ ಸಾಹಿತ್ಯ, ನವೀನ ಸಾಹಿತ್ಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ನವೋದಯ ಸಾಹಿತ್ಯವನ್ನು ಕುರಿತು ರಹಮತ್‌ತರೀಕೆರೆ ಅವರು "ತನ್ನಗತಕಾಲದ ಪರಂಪರೆಯ ಮತ್ತು ಸಂಪ್ರದಾಯ ಗಳ ಮೇಲೆರಗಿ ಅವುಗಳನ್ನು ಪರಿಷ್ಕರಿಸಲು ಸಿದ್ಧವಾದ ಒದು ಬಗೆಯ ಸೃಜನಾತ್ಮಕ ಚಳುವಳಿ" ಎಂದಿದ್ದಾರೆ. ಚದುರಂಗ ಅವರು "ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಹಳೆಯ ಕಾವ್ಯದ ಸಂಪ್ರದಾಯ ಬದ್ದತೆಯನ್ನು ಮುರಿದು, ನವೋದಯ ಸಾಹಿತ್ಯ ಮೂಡಿ ಬಂದಿತು" ಎಂದಿದ್ದಾರೆ[2].

ಒಟ್ಟಾರೆಯಾಗಿ 'ನವೋದಯ ಸಾಹಿತ್ಯ'ವು ಹಳೆಯ ಸಂಪ್ರದಾಯ ಮತ್ತು ಪರಂಪರೆಯ ಜಾಡಿನಿಂದ ಹೊರಳುವ ಸಂಕ್ರಮಣ ಬದುಕಿನ ಒಂದು ಹೊಸ ಮನೋಧರ್ಮದ ಸಿದ್ಧತೆಯಾಗಿದ್ದು. ೧೯ನೆಯ ಶತಮಾನದ ಆಂಗ್ಲ ವಸಾಹತುಷಾಹಿಯ ದಾಸ್ಯಕ್ಕೆ ಒಳಗಾದ ಸಂವೇದನೆಯಿAದ ರೂಪಿತವಾದ ಒಂದು ಬಗೆಯ ಸಾಹಿತ್ಯ ಪ್ರವೃತ್ತಿಯಾಗಿದೆ. ಅಂದರೆ ಇದು ೧೯ ನೆಯ ಶತಮಾನದ ಕೊನೆಯ ಮತ್ತು ೨೦ ನೆಯ ಶತಮಾನದ ಮೊದಲ ಭಾಗದಲ್ಲಿ ಕಾಣಿಸಿಕೊಂಡ ಹೊಸ ಬಗೆಯ ಬದುಕಿನ ಸಮಸ್ಯೆ ಸವಾಲು, ಬದುಕಿನ ಸಂಕೀರ್ಣತೆ, ರಾಷ್ಟ್ರಿ◌್ಟÃಯ ಪ್ರಜ್ಞೆ, ಸಾಂಸ್ಕೃತಿಕ ಪುನರುಜ್ಜೀವನ ಮತ್ತು ಪುನರ್ ಮೌಲೀಕರಣದ ಪ್ರಕ್ರಿಯೆಯಾಗಿದೆ.೩

ಇಂಗ್ಲಿಷ್ ಶಿಕ್ಷಣವನ್ನು ಪಡೆದ ನವೋದಯ ಕವಿಗಳು ಪಾಶ್ಚಾತ್ಯ ಸಾಹಿತ್ಯವನ್ನು ಅಧ್ಯಯನ ಮಾಡಿದ ನಂತರ **'ಹಳೆ ಬೇರು ಹೊಸ ಚಿಗುರುಕೂಡಿರಲು ಮರ ಸೊಗಸು'** ಎಂಬಂತೆ ಅಲ್ಲಿನ ಕಾವ್ಯ ಪ್ರಕಾರಗಳನ್ನು ಮತ್ತು ವಸ್ತುಗಳನ್ನು ತೆಗೆದುಕೂಂಡು ಅವುಗಳನ್ನ ತಮ್ಮದನ್ನಾಗಿ ಮಾಡಿಕೊಂಡು ಕಾವ್ಯಗಳನ್ನು ರಚಿಸಿದ್ದಾರೆ.

ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಪ್ರಬಂಧ, ಜೀವನಚರಿತ್ರೆ, ಆತ್ಮಕಥೆ, ಪ್ರವಾಸಕಥನ, ಮಕ್ಕಳ ಸಾಹಿತ್ಯ, ಸಂಶೋಧನ ಪ್ರುಬಂಧ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳನ್ನು ನವೋದಯ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ.

ನವೋದಯ ಕವಿಗಳು ಬಡತನ, ಪ್ರೀತಿ, ದೇಶಪ್ರೇಮ, ಪ್ರಕೃತಿ, ಆಧ್ಯಾತ್ಮ ಮೊದಲಾದ ವಸ್ತುಗಳನ್ನು ಕುರಿತು ಕವನಗಳನ್ನು ರಚಿಸಿದ್ದಾರೆ. ಅಲ್ಲದೆ ಅನೇಕ ವ್ಯಕ್ತಿಗಳನ್ನು ಕುರಿತು ಕೂಡ ಕವನಗಳನ್ನು ರಚಿಸಿರುವುದನ್ನು ಕಾಣಬಹುದು. ನವೋದಯ ಕವಿಗಳಲ್ಲಿ **ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಪು.ತಿ.ನ, ಡಿ.ವಿ.ಜಿ, ಜಿ.ಎಸ್.ಎಸ್, ರಾಜರತ್ನಂ, ಕಣವಿ, ನಿಸಾರ್ ಅಹ್ಮದ್, ಕೆ.ಎಸ್.ನ ಸಿದ್ದಯ್ಯ ಪುರಾಣಿಕ್, ಎಂ.ವಿ.ಸೀತಾರಾಮಯ್ಯ** ಮುಂತಾದವರು ಪ್ರಮುಖರಾಗಿದ್ದಾರೆ.

ಭಾವಗೀತೆ, ಪ್ರಗಾಥ, ಶೋಕಗೀತೆ, ಸುನೀತ, ಕಥನಕವನ, ಮಹಾಕಾವ್ಯ, ಖಂಡಕಾವ್ಯ, ಚುಟುಕ ಸಾಹಿತ್ಯ ಹೀಗೆ ಕಾವ್ಯದ ನಾನಾ ಪ್ರಕಾರಗಳನ್ನು ನವೋದಯ ಸಾಹಿತ್ಯದಲ್ಲಿ ಕಾಣಬಹುದು.

ಮನುಷ್ಯನ ಬದುಕು, ಪ್ರಕೃತಿ, ಪ್ರೇಮ ಮತ್ತು ದಾಂಪತ್ಯ, ಆಧ್ಯಾತ್ಮಿಕತೆ, ನಾಡು-ನುಡಿಯ ಚಿಂತನೆ, ರಾಷ್ಟ್ರೀಯತೆ ಮತ್ತು ಪರಂಪರೆ ಪ್ರಜ್ಞೆಗಳನ್ನು ಕುರಿತು ಕವನಗಳನ್ನು ರಚಿಸಿದ ನವೋದಯ ಕವಿಗಳು ವ್ಯಕ್ತಿಗಳನ್ನು ಕುರಿತು ಸಹ ಕವನಗಳನ್ನು ರಚಿಸಿರುವುದನ್ನು ಕಾಣಬಹುದಾಗಿದೆ. ಕೆಲವು ಕವಿಗಳ ವ್ಯಕ್ತಿ ಆಧಾರಿತ ಚಿತ್ರಣಗಳನ್ನು ಗಮನಿಸಬಹುದಾಗಿದೆ.

**ಬಿ.ಎಂಶ್ರೀಕಂಠಯ್ಯ :** ಮೊದಲಿಗೆ ಬಿ.ಎಂ.ಶ್ರೀ ಎಂದೇ ಪ್ರಸಿದ್ಧರಾದ ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಶಿಲ್ಪಿ 'ಕನ್ನಡದ ಕಣ್ವ'ಎಂದೇ ಜನಪ್ರಿಯತೆಗಳಿಸಿದ ಬಿ.ಎಂ.ಶ್ರೀಕಂಠಯ್ಯ ಅವರು ತಮ್ಮ 'ಇಂಗ್ಲಿಷ್ ಗೀತೆಗಳು' ಎಂಬ ಕವನ ಸಂಕಲನದಲ್ಲಿ **ನನ್ನ ಮೇರಿ** ಎಂಬ ವ್ಯಕ್ತಿಕವನವನ್ನು ಮತ್ತು **ಹೊಂಗನಸು** ಕವನ ಸಂಕಲನದಲ್ಲಿ **ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ, ಬಾನ್‌ಕೂಂಡ' ಕೃಷ್ಣನ್, ಪಂಪನ ಒರತೆ** ಎಂಬ ವ್ಯಕ್ತಿ ಕವನಗಳನ್ನು ರಚಿಸಿದ್ದಾರೆ. ಶ್ರೀ ಅವರ **ಬಾನ್‌ಕೂಂಡ ಕೃಷ್ಣನ್** ಕವನದ ಕೆಲವು ಸಾಲುಗಳು ಹೀಗಿವೆ :

**ಇನ್ನೊಮ್ಮೆ ಪಾಡುವೆನ್ ನನ್ನದೊರೆ ಕೃಷ್ಣನನ್**
**ಇನ್ನೊಮ್ಮೆ ಪಾಡುವೆನ್ ರಾಜರ್ಷಿ ಕೃಷ್ಣನನ್**
**ನನ್ನದೊರೆಗೆನ್ನ ಪೊರೆದಾಳ್ದಂಗೆ,**
**ನನ್ನೂಲವನಾಣ್ಮoಗೆ,**
**ನನ್ನುಸಿರ ಭಕ್ತಿಯೊಡೆಯಂಗೆ**

ಬಿ.ಎಂ.ಶ್ರೀ ಅವರು ನಾಲ್ವಡಿಕೃಷ್ಣರಾಜರ ಮೇಲಿರುವ ತಮ್ಮ ಸ್ವಾಮಿಭಕ್ತಿಯನ್ನು ಹೀಗೆ ಕಟ್ಟಿಕೊಟ್ಟಿದ್ದಾರೆ. ಸ್ವತಃ ನಾಲ್ವಡಿಕೃಷ್ಣರಾಜರೆ ಬಿ.ಎಂ.ಶ್ರೀ ಅವರಿಗೆ ರಾಜಸೇವಾಸಕ್ತ ಎಂಬ ಬಿರುದನ್ನು ನೀಡಿದ್ದಾರೆ. ಬಿ.ಎಂ.ಶ್ರೀ ಅವರು ಕೂಡ ಅವರÀನ್ನು ರಾಜರ್ಷಿ ಎಂದು ಕರೆದಿರುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಇದರಿಂದ ನಾಲ್ವಡಿ ಕೃಷ್ಣರಾಜರ ಮೇಲಿರುವ ಪ್ರೀತಿ, ಸ್ನೇಹ, ಸ್ವಾಮಿಭಕ್ತಿಯನ್ನು ಕಾಣಬಹುದು. ಬಿ.ಎಂ.ಶ್ರೀ ನಾಲ್ವಡಿ ಕೃಷ್ಣರಾಜರನ್ನು ಒಡೆಯ, ದೊರೆ, ಆಣ್ಮ ಎಂದು ಸಂಬೋಧಿಸಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

**ದ.ರಾ.ಬೇಂದ್ರೆ:** ವರಕವಿ, ಶಬ್ಧಗಾರುಡಿಗ ಎಂದೇ ಪ್ರಸಿದ್ಧರಾಗಿರುವ ಬೇಂದ್ರೆ ಅವರು ಬಡತನ, ಪ್ರೀತಿ, ದೇಶಪ್ರೇಮ, ಪ್ರಕೃತಿ, ರಾಷ್ಟ್ರಪ್ರೇಮ, ಆಧ್ಯಾತ್ಮ ಮೊದಲಾದ ವಸ್ತುಗಳನ್ನು ಕುರಿತು ಕವನಗಳಲ್ಲದೆ ಇವರು ಅನೇಕ ವ್ಯಕ್ತಿಗಳನ್ನು ಕುರಿತು ಕೂಡ ಕವನಗಳನ್ನು ರಚಿಸಿದ್ದಾರೆ. ಬೇಂದ್ರೆಯವರ ಕವನಗಳನ್ನು,

೧.ಪೌರಾಣಿಕ ವ್ಯಕ್ತಿಗಳನ್ನು ಕುರಿತ ಕವನಗಳು
೨.ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತ ಕವನಗಳು
೩.ಸಮಾಜ ಸುಧಾರಕರನ್ನು ಕುರಿತ ಕವನಗಳು
೪.ಕವಿಗಳನ್ನು ಕುರಿತ ಕವನಗಳು

೫ ಇತರೆ ಕವನಗಳು - ಎಂದು ವಿಭಾಗಿಸಬಹುದಾಗಿದೆ. **ಗಣಪತಿ, ಬ್ರಹ್ಮ, ದಶಾವತಾರಿ ವಿಷ್ಣು, ರುದ್ರ-ಮಹಾದೇವ** ಹಾಗೂ **ಶಕ್ತಿ** ಮುಂತಾದ ದೇವ-ದೇವತೆಯರನ್ನು" ಕುರಿತು ಕವನಗಳನ್ನು ರಚಿಸಿದ್ದಾರೆ. ರಾಮಾಯಣ ಮತ್ತು ಮಹಾಭಾರತದಲ್ಲಿ ಬರುವ ಪಾತ್ರಗಳನ್ನು **ಕುರಿತು ರವಿಕುಲದ ಬಾಲಕ, ಶ್ರೀರಾಮಾ ಜಯರಾಮಾ, ಸೀತಾ ಮಾಡಿದ ಶೋಕ, ಭರತ ಮತ್ತು ಅಹಲ್ಯೆ** ಎಂಬ ಕವನಗಳ ಜೊತೆ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ **ಗಾಂಧೀಜಿ** ಮತ್ತು **ಬಾಲಗಂಗಾಧರ ತಿಲಕರ** ಕುರಿತು ಬೇಂದ್ರೆ ಅವರು ಕವನಗಳನ್ನು ರಚಿಸಿರುವುದನ್ನು ಕಾಣಬಹುದು. ಬೇಂದ್ರೆಯವರು ಸಮಾಜ ಸುಧಾರಕರನ್ನು ಕುರಿತು **ಬುದ್ಧ,**

**ಪ್ರಬುದ್ಧ, ಬುದ್ಧ ಮೂರ್ತಿಯ ಅಮೃತ ಸ್ಮಿತ, ಓ ಭಾರತ ಸಂಚಾರಿಣಿ, ಶ್ರೀ ವಿವೇಕಾನಂದರ ಶಿಖರ-ಪ್ರಗಾಥಾ, ಶ್ರೀ ಅರವಿಂದರಿಗೆ, ಅರವಿಂದನಾಭನ ಪಾದಾರವಿಂದಕ್ಕೆ, ದಿ ಮದರ್, ಬೆಳ್ಳಿ ಹೂ, ಶ್ರೀ ರಾಮ ಕೃಷ್ಣೋದಯ** ಎಂಬ ಕವನಗಳನ್ನು ರಚಿಸಿದ್ದಾರೆ. ಉದಾಹರಣೆಗೆ ಬುದ್ಧ ಕವನದಲ್ಲಿ

**ಬುದ್ಧ, ಬುದ್ಧ-**

**ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ-** ಎಂದು ಹಳೆಯ ಗೌತಮ ಬುದ್ಧನ ವಾಚ್ಯ ವರ್ಣನೆಯನ್ನು ಮಾಡಿದ್ದಾರೆ. ಎರಡನೆಯ ಚರಣದಲ್ಲಿ ಕಾಮ, ಕ್ರೋಧ, ಮದ, ಮತ್ಸರ, ಮೋಹ-ಲೋಭವೆಂಬ ಆರು ಶತ್ರುಗಳನ್ನು ಬುದ್ಧನು ಗೆದ್ದ ವರ್ಣನೆಯಿದೆ. ಮೂರನೆಯ ಚರಣದಲ್ಲಿ ಅವನು ಒಂದು ದಿನ ರಾತ್ರಿ ರಾಜ್ಯವನ್ನು ತ್ಯಜಿಸಿ, ಬೊಲ್ಲ ಎಂಬ ಅಶ್ವವನ್ನೇರಿ ಅದೃಶ್ಯನಾಗಿ ಸಾಧಕ ಸಂನ್ಯಾಸಿಯಾದ ವಿವರಣೆಯಿದೆ. ನಾಲ್ಕನೆಯ ಚರಣದಲ್ಲಿ ಅವನು ಸಿದ್ಧ ಬುದ್ಧನಾದ, ಬೋಧಿ ವೃಕ್ಷದಡಿಯಲ್ಲಿ ತಪಸ್ಸನ್ನು ಮಾಡಿ ಕೈವಲ್ಯ ಜ್ಞಾನವನ್ನು ಪಡೆದು ಜ್ಞಾನಿಯಾದ ಎಂಬುದಾಗಿ ಸೂಚಿಸಲಾಗಿದೆ. ಐದನೆಯ ಚರಣದಲ್ಲಿ :

**ಬುದ್ಧ ಸತ್ತನು ಎಂದು ಯಾರೆಂದರೂ**
**ಬುದ್ಧನ ಜಯಂತಿಗಿದೆ ಜಯವೆಂದಿಗೂ**
**ಬುದ್ಧನ ಸಮಾಧಿಯದು ಮಾನವನ ಹೃದಯ**

ಎಂದು ಹಳೆಯ ಬುದ್ಧ ಹೋದರೂ, ಅವನ ಸಮಾಧಿಯು ಪ್ರತಿಯೊಬ್ಬನ ಹೃದಯಲ್ಲಿದೆ ಎಂದು ವರ್ಣಿಸಲಾಗಿದೆ.

ಕವಿಗಳನ್ನು ಕುರಿತು ಕಾಳಿದಾಸ, ಮಹಾಕವಿ ಕಾಳಿದಾಸನಿಗೆ ನಮನ, ಎಂಬ ಎರಡು ಕವನಗಳನ್ನು, ಆದಿಕವಿ ಪಂಪನನ್ನು ಕುರಿತು ಪಂಪನಿಗೆ, ಪಂಪನ ನೆನೆದು, ನೆನೆವುದೆನ್ನ ಮನಂ ಬನವಾಸಿದೇಶಮಂ ಎಂಬ ಮೂರು ಕವನಗಳನ್ನು ಮತ್ತು ರತ್ನಾಕರವರ್ಣಿಯನ್ನು ಕುರಿತು ರತ್ನಾಕರ ಎಂಬ ಕವನವನ್ನು ಬೇಂದ್ರೆಯವರು ರಚಿಸಿದ್ದಾರೆ. ಅಲ್ಲದೆ ಬಸವಣ್ಣ, ಸಿದ್ಧರಾಮ ಮುಂತಾದ ವನಕಾರರು, ಕನಕ, ಠ್ಯಾಗೋರ್ ,ಬಿ.ಎಂಶ್ರೀ, ಮಾಸ್ತಿ, ಮಧುರಚೆನ್ನ, ಪುತಿನ, ಕುವೆಂಪು ಮುಂತಾಗಿ ಬಹುಪಾಲು ಸಮಕಾಲೀನ ಕವಿಗಳೆಲ್ಲರನ್ನು ಕುರಿತು ಬೇಂದ್ರೆಯವರ ವ್ಯಕ್ತಿಚಿತ್ರಣ ಹಾಸುಹೊಕ್ಕಿದೆ.

ಇತರೆ ಕವನಗಳಲ್ಲಿ ಕುವೆಂಪು ಅವರಂತೆಯೇ ತಮ್ಮನ್ನೇ ಕುರಿತು ಬೇಂದ್ರೆಯವರು ಬಾಲ್ಯಕಾಂಡ, ಸಮಸ್ಯೆ, ನಾನು, ಅಂಬಿಕಾತನಯದತ್ತ, ಅಂಬಿಕಾತನಯದತ್ತ ಪದ್ಮಶ್ರೀ ಪಡೆದಾಗ ಎಂಬ ಕವನಗಳನ್ನು ರಚಿಸಿದ್ದಾರೆ. ಇವಲ್ಲದೆ ತಮ್ಮ ಮಕ್ಕಳು, ಕುಟುಂಬದ ಬಂಧುಗಳು, ಗೆಳೆಯರನ್ನುಕುರಿತು ವ್ಯಕ್ತಿಕವನಗಳನ್ನು ಬರೆದಿದ್ದಾರೆ.ಬೇಂದ್ರೆಯವರ ವ್ಯಕ್ತಿಕವನಗಳನ್ನೇ ಕುರಿತು ಸಂಶೋಧನೆ ನಡೆಯಬೇಕಾಗಿದೆ.

**ಕುವೆಂಪು :** ಜಗತ್ತಿಗೆ ವಿಶ್ವಮಾನವ ಸಂದೇಶವನ್ನು ಸಾರಿದ ಕುವೆಂಪು ಅವರು ಕುಮಾರವ್ಯಾಸ, ಶಂಕರಚಾರ್ಯ, ಕೇಶಿರಾಜ, ಕಾಮದೇವ, ಹಂಪೆಯಭೀಮ, ಊರ್ಮಿಳಾದೇವಿ, ಹೋಮರ್, ವರ್ಡ್ಸ್ವರ್ತ್, ಲೆನಿನ್, ಟಾಲ್ಸ್ಟಾಯ್, ಮಹಾತ್ಮಗಾಂಧಿ, ಮೋತಿಲಾಲ್ ನೆಹರು, ಬುದ್ಧದೇವ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದರಿಗೆ, ಪಂಪ, ಶ್ರೀರಾಮಪುರದಲ್ಲಿ ಗಾಂಧೀಜಿ ಮೊದಲಾದ ವ್ಯಕ್ತಿ ಕವನಗಳನ್ನು ರಚಿಸಿದ್ದಾರೆ. ಬೇರೆಯವರನ್ನು ಕುರಿತು ಕವನಗಳನ್ನು ರಚಿಸುವುದು ಸಹಜ. ಆದರೆ ತಮ್ಮನ್ನು

ಕುರಿತು ತಾವೇ ಕವನಗಳನ್ನು ರಚಿಸುವುದು ಅಪರೂಪ. ಕುವೆಂಪು ಅವರು ತಮ್ಮನ್ನೆ ಕುರಿತು ಕುವೆಂಪು, ಕುಲಪತಿಯ ಹಕ್ಕಿಯ ಹರಕೆ ಎಂಬ ಕವನಗಳನ್ನು ರಚಿಸಿರುವುದುನ್ನು ಕಾಣಬಹುದಾಗಿದೆ.

ಕುವೆಂಪು ಅವರು **ಮಹಾತ್ಮಗಾಂಧಿ** ಎಂಬ ಕವನದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿಯ ಗಾಂಧೀಜಿಯವರ ಪಾತ್ರ ಪ್ರಭಾವವನ್ನು- **"ಈ ಮಹಾ ಸ್ವಾತಂತ್ರ್ಯ ರಣಯಾಗ ಭೂಮಿಯಲಿ ಶ್ವೇತಾಗ್ನಿ ಜ್ವಾಲೆಯೊಂದುರಿಯುತ್ತಿದೆ"** ಎಂಬ ಭವ್ಯ ದಿವ್ಯಕಲ್ಪನೆಯ ರೂಪಕವನ್ನೇ ಕೊಟ್ಟಿರುವರು. **ಅವರು ಶಾಂತಿಯಲ್ಲಿ ಹಿಮಾಲಯದಂತೆ, ಆಕಾಶದಲ್ಲಿ ಹೊಳೆಯುವ ನಕ್ಷತ್ರದಂತೆ, ವಿಶ್ವವನ್ನೇ ಕಂಪನ ಮಾಡುವ ಧರ್ಮದ ಬಲವೇ ಮೂರ್ತಿವೆತ್ತಂತೆ ಜನಿಸಿ, ಭೂಮಿಯನ್ನು ಪಾವನಗೊಳಿಸಿದ**ನೆಂದು ಗಾಂಧಿಯನ್ನು ವರ್ಣಿಸಿರುವರು. ಕವನದ ಕೆಲವು ಸಾಲುಗಳು ಹೀಗಿವೆ:

**"ಓ ಮಹಾತ್ಮನೆ, ನಿನ್ನ ಸಾನಿಧ್ಯತೀರ್ಥದಲ್ಲಿ**
**ಮಾನವನ ಮೋಹ ಮದ ಮಾತ್ಸ್ಯಗಳು ಮಿಂದು**
**ಪ್ರೇಮದಿ ಪುನೀತವಾಗಿಹವು ! ಸುಮೂಹತ್ತಿನಲಿ[4]**

ಅಂದುಧರ್ಮದಲ್ಲಿ ವಿಶ್ವಾಸವನು ಕಳೆದುಕೊಂಡು ಮೋಹ, ಮದ, ಮಾತ್ಸರ್ಯಗಳು ತುಂಬಿದ ನಮ್ಮನ್ನು ನಿಮ್ಮ ಪ್ರಚ್ಛನ್ನ ದೃಢಭಕ್ತಿಯು ನಮನ್ನು ಕಾಪಾಡಿದವುಎಂದು ವರ್ಣಿಸಿದ್ದಾರೆ.

**ಚೆನ್ನವೀರ ಕಣವಿ :** ಕನ್ನಡದ ಖ್ಯಾತ ವಿದ್ವಾಂಸ ಮತ್ತು ಹೊಸಗನ್ನಡ ಕಾವ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಚನ್ನವೀರಕಣವಿ ಅವರು **ಶ್ರೀ ಕವಿರತ್ನಂ, ಎಪ್ಪತ್ತರ ಬೇಂದ್ರೆ, ಬೇಂದ್ರೆ ಪ್ರತಿಮೆ, ಹಳಕಟ್ಟಿಯವರು,** ಲಾಲ **ಬಹಾದ್ದೂರ್ ಶಾಸ್ತ್ರೀ, ತೀ.ನಂ.ಶ್ರೀಯವರ ಪಯಣ, ಗಾಂಧಿ, ವಿನಾಯಕರಿಗೆ ವಂದನೆ, ಸರ್ವಜ್ಞ ಕವಿ, ಡಾ.ಅಂಬೇಡ್ಕರ್ ಕುರಿತು, ರಂಜನಾ (ತಮ್ಮ ಮಗಳನ್ನು ಕುರಿತು), ನೀಲಾಂಬಿಕ, ಬಸವಣ್ಣನ ಬೆಳಗು, ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ, ಅರುವತ್ತರೊಸಗೆಯಲಿ (ಚನ್ನವೀರಕಣವಿ ಅವರು ತಮ್ಮ ಅಕ್ಕ ಶಾಂತಕ್ಕರವರನ್ನು ಕುರಿತು ಬರೆದ ಕವನ), ಕನ್ನಡಜ್ಯೋತಿಯ ದೀಪಗಳು** ಎಂಬ ವ್ಯಕ್ತಿ ಕವನಗಳನ್ನು ರಚಿಸಿದ್ದಾರೆ. ಕಣವಿಯವರು ಸಮಕಾಲೀನ ರಾಷ್ಟ್ರ ನಾಯಕರ ಬಗ್ಗೆ ಬರೆದ ಸುನೀತಗಳಲ್ಲಿ **ಲಾಲ ಬಹದ್ದೂರ್ ಶಾಸ್ತ್ರೀ** ಸುನೀತ ವಿಶಿಷ್ಟವಾಗಿದೆ. ಈ ಕವನದಲ್ಲಿ ಕಣವಿಯವರು ಲಾಲ ಬಹದ್ದೂರ್ **ಶಾಸ್ತ್ರೀ** ಯವರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. **ಬಡತನವೆಂಬ ಪಲ್ಲಕ್ಕಿಯನ್ನು ಹೊತ್ತು ಮೆರೆಸಿದ, ಪ್ರಾಮಾಣಿಕತೆಯನ್ನು ಹೊಂದಿದ್ದ ಸಾದಾ ಸೀದಾ ಮನುಷ್ಯ ನಮ್ಮ ಮಧ್ಯೆ ಇದ್ದರು ಎಂದರೆ ನೀವು ನಂಬುತ್ತಿರಾ?** ಎಂದು,

**ಹೆಂಡತಿ ಮಕ್ಕಳಿಗೆ ಆಸ್ತಿ ಸಂಪಾದಿಸದ**
**ಮನೆಯಿರದ ಪ್ರಧಾನಿ, ಇವನೆಂಥ ಭಾರತೀಯ? [5]**

ಇಂದಿನ ರಾಜಕೀಯದಲ್ಲಿ ಪ್ರಧಾನಿಯಿಂದ ಹಿಡಿದು ಕೆಳಗಿನ ಸಾಮಾನ್ಯ ಗುಮಾಸ್ತನವರೆಗೆ ಆಸ್ತಿ, ಮನೆ, ಹಣ ಮಾಡುತ್ತಿರುವ ಈ ಸಮಯದಲ್ಲಿ ದೇಶದ ಪ್ರಧಾನಿಯಾಗಿದ್ದರೂ ಹೆಂಡತಿ, ಮಕ್ಕಳಿಗೆ ಆಸ್ತಿ, ಮನೆ, ಹಣ, ಸಂಪಾದನೆ ಮಾಡದ, ಉಳಿಯಲು ಸ್ವಂತ ಮನೆಯಿರದ ಇವನೆಂಥ ಭಾರತೀಯ? ಎಂದು ವ್ಯಂಗ್ಯವಾಗಿ ಕವಿ ಪ್ರಶ್ನಿಸುತ್ತಾರೆ. ಗಾಂಧಿಯುಗದ ಮೌಲ್ಯಗಳ ಪ್ರತಿನಿಧಿಯಾಗಿ ಉಳಿದ **ಲಾಲ ಬಹದ್ದೂರ್ ಶಾಸ್ತ್ರೀ** ಅವರು ತಮಗಾಗಿ ಏನನ್ನು ಮಾಡಿಕೊಳ್ಳದೆ ದೇಶಕ್ಕಾಗಿ ಎಲ್ಲವನ್ನು

ತ್ಯಾಗ ಮಾಡಿದ ಮಹಾನುಭಾವರು ಎಂಬುದಾಗಿಯೂ ಕವಿ ಇಲ್ಲಿ ತಿಳಿಸಿದ್ದಾರೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಅವರಿದ್ದರು. ತಾನು ಭಾರತದ ಪ್ರಧಾನಿ ಎಂಬ ಅಹಂಕಾರ ಅವರಿಗಿರಲಿಲ್ಲ. ಸುತ್ತ ಇರುವ ಭಟ್ಟಂಗಿಗಳಿಂದ ಅವರು ದೂರವಿದ್ದರು. ಜನರ ಮಧ್ಯೆ ನಿಂತು ಜನರ ಸಮಸ್ಯೆ ದುಃಖ ದುಮ್ಮಾನಗಳಿಗೆ ಸ್ಪಂದಿಸಿ ಎಲ್ಲರ ಅಭಿಪ್ರಾಯಗಳನ್ನು ಕಿವಿಗೊಟ್ಟು ಆಲಿಸುವರು ಹಾಗೆಯೇ ತಮ್ಮ ಪ್ರಾಮಾಣಿಕ ನಿಲುವುಗಳನ್ನು ಎಂದೂ ಬಿಟ್ಟುಕೊಡುತ್ತಿರಲಿಲ್ಲ. ಅವರು ಭಾರತದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಭಾರತವು ಎದುರಿಸುತ್ತಿದ್ದ ಸಮಸ್ಯೆಗಳ ಮಹಾಪೂರವನ್ನು ಧೀರರಾಗಿ ತೆಪ್ಪದಲ್ಲಿ ದಾಟಿಸಿದರು. ಅವರು ಕೇವಲ ರಾಜಕಾರಣಿಯಾಗಿರದೆ ರಾಜನೀತಿಜ್ಞರು, ರಾಜಕೀಯ ಮುತ್ಸದ್ಧಿಯಾಗಿದ್ದರು. ಆದ್ದರಿಂದಲೇ ಜನತೆಯ ಮೈಮೇಲೆ ಬಿದ್ದ ಗಾಯಗಳನ್ನು ಮಾಯಿಸಿದವರು.

ಭಾರತದ ಪ್ರಧಾನಿಯಾಗಿದ್ದ **ಶಾಸ್ತ್ರೀ** ಅಹಿಂಸೆ, ಶಾಂತಿಯ ಪ್ರತಿಪಾದಕರಾಗಿದ್ದರು. ಇಷ್ಟೆಲ್ಲಾ ವಿಚಾರಗಳನ್ನು ತಿಳಿಸಿದ ಕವಿ ರಾಜಕೀಯರಂಗದಲ್ಲಿ ಇರುವವರಿಗೆ **ಲಾಲ ಬಹದ್ದೂರ್ ಶಾಸ್ತ್ರೀ** ಯವರು ಮಾದರಿಯಾಗಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ.

**ಜಿ. ಎಸ್ ಶಿವರುದ್ರಪ್ಪ**: ಕನ್ನಡದ ರಾಷ್ಟ್ರಕವಿಗಳ ಸಾಲಿನಲ್ಲಿ ವಿರಾಜಮಾನರಾಗಿರುವ ಶ್ರೇಷ್ಠ ಪ್ರಾಧ್ಯಾಪಕ, ಅತ್ಯುತ್ತಮ ಆಡಳಿತಗಾರರಾದ ಜಿ.ಎಸ್.ಶಿವರುದ್ರಪ್ಪ ಅವರು **ಗೊಮಟೇಶ, ಶ್ರೀ ವಿವೇಕಾನಂದರಿಗೆ, ಕವಿ ರವೀಂದ್ರರನ್ನು ಕುರಿತು, ವಿವೇಕಾನಂದ, ಆದಿ ಕವಿಗೆ, ಶತಮಾನೋತ್ಸವ, ವಾಲ್ಮೀಕಿ, ತೀ.ನಂ.ಶ್ರೀ, ಬಸವಣ್ಣನವರಿಗೆ-೧, ಬಸವಣ್ಣನವರಿಗೆ-೨, ಗಾಂಧಿ, ಗಾಂಧಿ ಶತಮಾನೋತ್ಸವ, ಭೀಮಾಲಾಪ, ಶ್ರೀ ಅರವಿಂದರಿಗೆ, ಶ್ರೀ ಕುವೆಂಪು ಅವರಿಗೆ, ಬಿ.ಎಂ.ಶ್ರೀ, ನಿಮ್ಮ ಹಾಗೇ ನಿಮ್ಮ ಕವಿತೆ(ಕಣವಿ ಅವರನ್ನು ಕುರಿತು)** ಎಂಬ ವ್ಯಕ್ತಿ ಕವನಗಳನ್ನು ರಚಿಸಿದ್ದಾರೆ.

ಜಿ.ಎಸ್. ಶಿವರುದ್ರಪ್ಪ ಅವರು **ಗಾಂಧಿ** ಕವನದಲ್ಲಿ ಇಂದಿನ ಕಾಲದಲ್ಲಿ ವಿಚಿತ್ರವೆನಿಸಿದ ವಿಲಕ್ಷಣ ವ್ಯಕ್ತಿತ್ವವನ್ನು ಇಂದಿನ ಮೌಲ್ಯ ಆದರ್ಶಗಳೊಂದಿಗೆ ತುಲನಾತ್ಮಕವಾಗಿ ನೋಡಿರುವರು. ಇದು ವ್ಯವಹಾರಿಕ ಜಗತ್ತು. ಎಲ್ಲದಕ್ಕೂ ಲಾಭ-ನಷ್ಟ ಲೆಕ್ಕಹಾಕಿ ಬದುಕುವ ಕಾಲ. ಇಂಥ ಕಾಲದಲ್ಲಿ ಗಾಂಧೀಜಿಯೊಬ್ಬ ವಿಚಿತ್ರ ಮನುಷ್ಯನಾಗಿ ಎಲ್ಲಿಂದ ಬಂದನೋ! ಏನೋ ಬಂದು ಬೆಲೆ ಕಟ್ಟಲು ಬಾರದ ಈ ಜನತೆಯ ಮುಂದೆ ತನ್ನದೊಂದು ಅಂಗಡಿ ತೆರೆದು ಎಲ್ಲಾ ಹರಾಜಿಗಿಟ್ಟನೆಂದು ವಿಡಂಬನಾತ್ಮಕವಾಗಿ ವಿನೋದವಾಗಿ ಗಾಂಧೀಜಿಯವರ ವಿಶೇಷ ವ್ಯಕ್ತಿತ್ವದ ವಿವರಣೆಗೆ ಪೀಠಿಕೆ ಹಾಕಿರುವರು. ಇಂದು ಯಾವುದನ್ನು ಮಾಡಿದರೆ ಶ್ರೇಷ್ಠ ವ್ಯಕ್ತಿಯೆನ್ನುತ್ತಾರೆಯೋ ಗಾಂಧೀಜಿ ಅದನ್ನು ಮಾಡದೆ, ಶ್ರೇಷ್ಠತೆಯ ಮಾನದಂಡಗಳಾವುವೋ ಅವು ಇರದೆ ಅದಕ್ಕಿಂತಲೂ ಶ್ರೇಷ್ಠ ವ್ಯಕ್ತಿಯಾಗಿರುವರೆಂಬುದನ್ನು ಹೀಗೆ ವರ್ಣಿಸಿರುವರು:

**"ಕಾವಿಯುಡಲಿಲ್ಲ ಹೆಣ್ಣ ಬಿಡಲಿಲ್ಲ**
**ಎಲ್ಲೋ ಮಠದೊಳಗೆ ಕೂತು ರಹಸ್ಯವಾಗಿ**
**ಜಪಮಣಿ ಎಣಿಸಿ ಸಮಾಧಿಸ್ಥನಾಗಲಿಲ್ಲ"** [6]

ಅಲ್ಲದೆ ಪವಾಡಗಳನ್ನು ಮಾಡಲಿಲ್ಲ. ಜನಸಾಮಾನ್ಯರೊಂದಿಗೆ ಅವರಂತೆಯೇ ಪ್ರಾರ್ಥಿಸಿರುವರು ಆದರೂ ಶ್ರೇಷ್ಠ ಸಂತ, ಫಕೀರನೆಂದು ಬಗೆಯಲಾಯಿತು. ಕತ್ತಿ-ಕೋವಿ ಹಿಡಿಯಲಿಲ್ಲ ಆದರೂ ಅಹಿಂಸಾ ಅಸ್ತ್ರದಿಂದ ಯುದ್ಧ ಮಾಡಿದರು. ಏಕಾಂಗಿಯಾದರೂ ಜನಗಣಮನದ ಅಧಿನಾಯಕರಾದರು, ದೇಶವನ್ನು ಬಿಡುಗಡೆಗೊಳಿಸಲು ಶ್ರಮಿಸಿ ಬಳಲಿದ್ದಕ್ಕೆ ಹಂತಕರ

ಗುಂಡಿಗೆ ಬಲಯಾದುದೇ ಅವರಿಗೆ ವಿಶ್ರಾಂತಿಯಾಯಿತೆಂಬಂತೆ **ಸಿಡಿಗುಂಡುಗಳ ಹಾಸಿಗೆಯ ಮೇಲೆ ನಿನಗೆ ತಣ್ಣನೆ ನಿದ್ದೆ** ಎಂದು ಬಣ್ಣಿಸಿರುವರು. ಗಾಂಧೀಜಿಯವರು ಮಡಿದ ಮೇಲೆ ಈ ನಾಡು ಮತ್ತೆ ಜಡನಿದ್ದೆಯಲ್ಲಿ ಮುಳುಗಿತೆಂಬುದನ್ನು **"ನಮಗೊ ನಿದ್ದೆ ಒಮ್ಮೊಮ್ಮೆ ಎಚ್ಚರ"** ಎಂದಿರುವರು. ಒಮ್ಮೊಮ್ಮೆ ಎಚ್ಚರವಾದಾಗಲೇ ಈ ನಾಡಿನಲ್ಲಿ ಗಾಂಧೀಜಿ ಹೋದ ಮೇಲೂ ಅವರ ತತ್ವ, ಆದರ್ಶ, ಸಿದ್ಧಾಂತಗಳಿಗೆ ಯಾವ ರೀತಿ ತಿಲಾಂಜಲಿ ಇಡಲಾಗಿದೆ ಎಂಬುದನ್ನು ಮಾರ್ಮಿಕವಾಗಿ ಹೇಳಿರುವರು.

**ಕೆ.ಎಸ್.ನರಸಿಂಹಸ್ವಾಮಿ** : ಪ್ರೇಮಕವಿ ಎಂದೇ ಪ್ರಸಿದ್ಧರಾಗಿರುವ ಕೆ.ಎಸ್.ನ ಅವರು **ಕಲಿಯಾಗಿ ಬಾ ಕೃಷ್ಣ, ಡೊಮಿನಿಯನ್ ಜನನ, ಗಾಂಧೀಜಿಯ ಪಾದಕ್ಕೆ, ಶಿವ ರಾಮರಾಯರು, ಸೀತೆಯ ಭಾಗ್ಯ, ಮಾಸ್ತಿಯವರ ಕವಿತೆ, ಶ್ರೀ ಅವರಿಗೆ, ಪಂಪನಿಗೆ, ಬುದ್ಧಸ್ಮಿತ, ವಿ.ಸೀ ಅವರಿಗೆ, ಅಡಿಗರ ಮಾತು, ಕವಿ ರಾಬರ್ಟ್ ಬರ್ನ್ಸ್, ತೀ.ನಂ.ಶ್ರೀ ಅವರಿಗೆ, ಸಿಂಗಾರಮ್ಮ, ದೈವ** ಮೊದಲಾದ ವ್ಯಕ್ತಿ ಕವನಗಳನ್ನು ರಚಿಸಿದ್ದಾರೆ.

ಕೆ.ಎಸ್.ನರಸಿಂಹಸ್ವಾಮಿ ಅವರು ತಮ್ಮ **ಸೀತೆಯ ಭಾಗ್ಯ** ಕವನದಲ್ಲಿ ಸಮಸ್ತ ಇಡೀ ಲೋಕಕ್ಕೆ ಸೀತೆಯೇ ತಾಯಿ, ಸಾವಿರ ರಾಮರೂ ಕೂಡ ಅವಳ ತೂಕಕ್ಕೆ ತೂಗಲು ಸಾಧ್ಯವಿಲ್ಲ. ರಾಮಾಯಣ ಎಂದು ಹೆಸರಿಟ್ಟಿರುವುದೇ ಸೀತೆಯ ಕಥೆಗೆ ಅನ್ಯಾಯ. ಸೀತೆಯನ್ನು ರಾವಣನು ಅಪಹರಿಸಿ ಸೆರೆಯಲ್ಲಿಟ್ಟಿರಲು ರಾಮ-ರಾವಣರಿಗೆ ಯುದ್ಧ ಮುಗಿದು ರಾವಣನು ರಾಮನಿಂದ ಹತನಾದ ಮೇಲೆ ರಾವಣನ ಸೆರೆಯಿಂದ ಹೊರಬಂದ ಸೀತೆಯನ್ನು ಆಕೆಯ ಕೈಹಿಡಿದ ರಾಮನು ಆಕೆಯನ್ನು ಸಂಶಯದ ಓರೆಗಣ್ಣಿನಿಂದ ನೋಡಿದ ಮೇಲೆ ಸೀತೆಗೆ ಇನ್ಯಾವ ಭಾಗ್ಯ ಉಳಿದಿತ್ತು. ಈ ರೀತಿ ಸಂಶಯವನ್ನು ಪಡಲು ಲೋಕವನು ಒಪ್ಪಿಸುವ ಕುಂಟುನೆಪವನ್ನು ಕೊಡುವುದೇಕೆ, ಆದರೂ ಕೂಡ ಸೀತೆ ಗಂಡನ ಸಂಶಯವನ್ನು ಪರಿಹರಿಸಲು ಅಗ್ನಿಪ್ರವೇಶ ಮಾಡಿ ಬೆಳ್ದಿಂಗಳಾದಳು ಎಂದು ಹೇಳುವ ಕವಿ ಹೀಗೆ ಹೇಳುತ್ತಾರೆ:

**ಮಹಾಲಕ್ಷ್ಮಿ ಸೀತೆ, ಗಂಡಿಗೆ ಬಂದ ಸಂಶಯವೆ**
**ಹೆಣ್ಣಿಗೂ ಬಂದು, ಒಂದೇ ಮಾತನಾಡಿದಳೆ?**
**ಲೋಕ ಸಮ್ಮತಿಯ ಬೇಡಿದಳೆ?** [7]

ಸೀತೆ ಮಹಾಲಕ್ಷ್ಮಿಯಾಗಿದ್ದಾಳೆ. ಒಂದು ವೇಳೆ ಗಂಡಿಗೆ ಬಂದ ಸಂಶಯವೆ ಹೆಣ್ಣಿಗೂ ಬಂದು ಒಂದೇ ಒಂದು ಮಾತನಾಡಿದಳೇ? ಎಂದು ಆಕೆ ರಾಮನ ವಿರುದ್ಧ ಪ್ರತಿಭಟಿಸಲಿಲ್ಲ ಎಂದು ಗಂಡ ತನ್ನ ಮೇಲೆ ಸಂಶಯ ಪಡುತ್ತಿರುವುದು ಸರಿಯೇ ಎಂದು ಲೋಕ ಸಮ್ಮತಿಯನ್ನು ಬೇಡಿದಳೆ ಇಲ್ಲ ಗಂಡ ಹೇಳಿದ ಹಾಗೆ ಕೇಳಿದಳು ಎಂಬುದಾಗಿ ಸೀತೆಗಾದ ಅನ್ಯಾಯವನ್ನು ಈ ಕವನದಲ್ಲಿ ಕಟ್ಟಿಕೊಟ್ಟಿದ್ದಾರೆ. ಅಲ್ಲದೆ ಇಲ್ಲಿ ಕವಿಯ ಲಿಂಗಸಮಾನತೆ, ಸ್ತ್ರೀ ಪರವಾದ ನಿಲುವನ್ನು ಗಮನಿಸಬಹುದಾಗಿದೆ.

ಇವರುಗಳಲ್ಲದೆ **ಎಸ್.ವಿ.ಪರಮೇಶ್ವರಭಟ್ಟರು, ಚಿದಂಬರದೀಕ್ಷಿತರು, ಅರ್ಚಿಕವೆಂಕಟೇಶರು, ಗಿರಡ್ಡಿಗೋವಿಂದರಾಜರು, ಸಿದ್ಧಲಿಂಗ ಪಟ್ಟಣಶೆಟ್ಟರು, ಕೆ.ಎಸ್.ನಿಸಾರ್‌ಅಹಮ್ಮದ್** ಇನ್ನೂ ಅನೇಕ ನವೋದಯ ಕಾಲಘಟ್ಟದ ಕವಿಗಳು ವ್ಯಕ್ತಿಗಳನ್ನು ಕುರಿತು ಕವನಗಳನ್ನು ರಚಿಸಿದ್ದಾರೆ. ಪು.ತಿ.ನ ಅವರ **`ನೆರಳು'** ಕವನ ಗಾಂಧಿಯವರನ್ನು ಕುರಿತು ಪ್ರಸಿದ್ಧಿ ಪಡೆದಿದೆಯೆಂಬುದನ್ನ ಗಮನಿಸಬಹುದು.

**ಅಡಿಟಿಪ್ಪಣಿಗಳು :**

೧.ಹೊಸಗನ್ನಡ ಸಾಹಿತ್ಯ ಚರಿತ್ರೆ: ಪೋ.ಎಲ್.ಎಸ್.ಶೇಷಗಿರಿರಾವ್, ಅಂಕಿತ ಪುಸ್ತಕ ಪ್ರಕಾಶನ, ೨೦೧೩.

೨. ಅದೇ.

೩. ಅದೇ.

೪. ಕುವೆಂಪು ಸಮಗ್ರ ಕಾವ್ಯ ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦, ಪು.೫೧೦.

೫. ಕಣವಿಯವರ ಕವಿತೆ: ಹೊಸ ಓದು, ಡಾ.ಗುರುಲಿಂಗ ಕಾಪಸೆ, ಡಾ.ಜಿ.ಎಂ.ಹೆಗಡೆ (ಸಂ.) ೨೦೦೮, ಪು.೨೩೧.

೬ ಜಿ.ಎಸ್.ಶಿವರುದ್ರಪ್ಪ ಸಮಗ್ರ ಕಾವ್ಯ: ೨೦೧೧, ಪು.೩೮೫.

೭. ಮಲ್ಲಿಗೆಯ ಮಾಲೆ:ಕೆ ಎಸ್.ನರಸಿಂಹಸ್ವಾಮಿ,ಲಿಪಿ ಪ್ರಕಾಶನ,ಬೆಂಗಳೂರು ೨೦೦೪

**ಪರಾಮರ್ಶನ ಕೃತಿಗಳು**

೧. ಹೊಸಗನ್ನಡ ಸಾಹಿತ್ಯ ಚರಿತ್ರೆ : ಪ್ರೊ. ಎಲ್.ಎಸ್. ಶೇಷಗಿರಿ ರಾವ್, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು, ೨೦೧೩ .

೨. ಅಂಬಿಕಾತನಯದತ್ತರ ಸಮಗ್ರಕಾವ್ಯ ನಮನ ಸಂಪುಟ-೧ : ವಾಮನಬೇಂದ್ರೆ(ಸಂ), ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳ್ಳಿ, ೨೦೦೩.

೩. ಅಂಬಿಕಾತನಯದತ್ತರ ಸಮಗ್ರ ಕಾವ್ಯ ವಿಕಾಸ ಸಂಪುಟ-೩ :ವಾಮನಬೇಂದ್ರೆ(ಸಂ), ವರಕವಿ ಡಾ|| ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೪. ಕುವೆಂಪು ಸಮಗ್ರ ಕಾವ್ಯ ಸಂಪುಟ-೧ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦.

೪. ಕುವೆಂಪು ಸಮಗ್ರ ಕಾವ್ಯ ಸಂಪುಟ-೨ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦.

೫. ಕನ್ನಡ ಸಾಹಿತ್ಯ ಕೋಶ : ರಾಜಪ್ಪ ದಳವಾಯಿ(ಸಂ), ಶ್ರೀ ರಾಘವೇಂದ್ರ ಪ್ರಕಾಶನ, ಚಿಕ್ಕಪೇಟೆ, ಬೆಂಗಳೂರು. ೨೦೧೫.

೬. ಹೊಸಗನ್ನಡ ಸಾಹಿತ್ಯಾವಲೋಕನ : ಡಾ. ಎಸ್.ಎಸ್. ಭಗವತಿ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೩.

೭. ಕಣವಿಯವರ ಕವಿತೆ : ಹೊಸ ಓದು, ಡಾ. ಗುರುಲಿಂಗ ಕಾಪಸೆ-ಡಾ. ಜಿ.ಎಂ.ಹೆಗಡೆ (ಸಂ.) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮. ಕಣವಿಯವರ ಸಮಗ್ರ ಕಾವ್ಯ :ರಾಜೇಂದ್ರ ಪ್ರಿಂಟರ್ಸ್ ಶಿವರಾಂ ಪೇಟೆ, ಮೈಸೂರು,೨೦೦೭.

೮. ಜಿ.ಎಸ್.ಶಿವರುದ್ರಪ್ಪ ಸಮಗ್ರ ಕಾವ್ಯ : ಕಾಮಧೇನು ಪುಸ್ತಕಭವನ, ಬೆಂಗಳೂರು, ೨೦೧೧.